# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1015

ಉತ್ತರಿಸಬೇಕಾದ ದಿನಾಂಕ : 20-08-2025

ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾಗಿ 30 ವರ್ಷಗಳಿಂದ ಅಧಿಕೃತವಾಗಿ ವಾಸ ಮಾಡುತ್ತಿದ್ದ ಜಯನಗರ 7ನೇ ಬ್ಲಾಕಿನ ಶಾಸ್ತ್ರಿ ನಗರದ ಮನ ನಂಬರ್ 178 ಎ ಮನೆಯನ್ನು ಅನಧಿಕೃತವಾಗಿ ಕೆಡವಿ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ; | ಬೆಂಗಳೂರು ನಗರದ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯಡಿಯೂರು ಗ್ರಾಮದ ಸರ್ವೆ ನಂ.53/3 ರಲ್ಲಿ 0-33 ½ ಗುಂಟೆ ವಿಸ್ತೀರ್ಣದಲ್ಲಿರುವ ಶಾಸ್ತ್ರಿನಗರ ಕೊಳಚೆ ಪ್ರದೇಶದಲ್ಲಿ ಸುಮಾರು ವರ್ಷಗಳಿಂದ ವಾಸವಾಗಿದ್ದ 178 ಕುಟುಂಬಗಳಿಗೆ (ಎಸ್‌ಸಿ/ ಎಸ್‌ಟಿ ಜನಾಂಗ ಮತ್ತು ಇತರ ಸಾಮಾನ್ಯ ವರ್ಗ ಒಳಗೊಂಡಂತೆ) ಮಂಡಳಿಯಿಂದ ಪರಿಚಯ ಪತ್ರ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸ್ವಾಧೀನಪತ್ರ ನೀಡಲಾಗಿರುತ್ತದೆ. ಸುಮಾರು ವರ್ಷಗಳಿಂದ ವಾಸವಾಗಿರುವ 178 ಅಧಿಕೃತ ಕುಟುಂಬಗಳು ವಾಸಿಸುತ್ತಿರುವ ಮನೆಯನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಒಡೆದು ಹಾಕಿರುವುದಿಲ್ಲ.<br><br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಿಸಿರುವ ಮನೆಗಳ ಕಟ್ಟಡಕ್ಕೆ ಹೊಂದಿಕೊಂಡಂತಿರುವಂತೆ, ಮಂಡಳಿಯ ಮಾಲೀಕತ್ವಕ್ಕೆ ಒಳಪಡುವ ಜಾಗದಲ್ಲಿ ಅನಧಿಕೃತ ಖಾಸಗಿ ವ್ಯಕ್ತಿಯಿಂದ ದಿನಾಂಕ: 24-12-2023 ಮತ್ತು 25-12-2023 (ಸಾರ್ವತ್ರಿಕ ರಜ ದಿವಸಗಳಲ್ಲಿ) ರಂದು ಮನೆಯನ್ನು ನಿರ್ಮಾಣ ಮಾಡುತ್ತಿರುವುದಾಗಿ ಸ್ಥಳೀಯರ ದೂರವಾಣಿ ಕರೆಯಿಂದ ತಿಳಿದು ಬಂದಿರುವ ಹಿನ್ನೆಲೆಯಲ್ಲಿ ದಿನಾಂಕ: 26-12-2023 ರಂದು ಸ್ಥಳ ಪರಿಶೀಲನೆ ಮಾಡಿ ಮಹಜರ್ ಸಹ ಮಾಡಲಾಗಿರುತ್ತದೆ. ಅದರಂತೆ ಸ್ಥಳೀಯ ಪೊಲೀಸ್ ಠಾಣೆಗೆ ಅನಧಿಕೃತ ಕಟ್ಟಡ ನಿರ್ಮಿಸಲು ಯತ್ನಿಸುತ್ತಿರುವ ವ್ಯಕ್ತಿಯ ವಿರುದ್ಧ ಸೂಕ್ತ ಕ್ರಮಕ್ಕೈಗೊಳ್ಳುವಂತೆ ದಿನಾಂಕ: 28-12-2023 ರಂದು ಮಂಡಳಿಯಿಂದ ಪತ್ರ ಬರೆಯಲಾಗಿರುತ್ತದೆ. ಸದರಿ ಅನಧಿಕೃತ ವ್ಯಕ್ತಿ ಪ್ರಶ್ನಿತ ಜಾಗದ ಅಧಿಕೃತ ದಾಖಲೆಗಳನ್ನು ಪೊಲೀಸ್ ಠಾಣೆಗೆ ಸಹ ಸಲ್ಲಿಸಿರುವುದಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಮಂಡಳಿಯಿಂದ ಸಿದ್ಧಪಡಿಸಿರುವ ಶಾಸ್ತ್ರಿನಗರ ನಿವಾಸಿಗಳ ಪಟ್ಟಿಯಲ್ಲಿ ಸದರಿ ಅನಧಿಕೃತವಾಗಿ ಮನ ನಿರ್ಮಾಣ ಮಾಡುತ್ತಿದ್ದ ವ್ಯಕ್ತಿಯ ಹೆಸರು ಪಟ್ಟಿಯಲ್ಲಿ ಇರುವುದಿಲ್ಲ. ಆದ್ದರಿಂದ ಮಂಡಳಿಯ ಖಾಲಿ ಜಾಗದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ಮಾಡುತ್ತಿರುವ ಖಾಸಗಿ ವ್ಯಕ್ತಿಯಿಂದ ಸ್ಥಳಕ್ಕೆ ಸಂಬಂಧಪಟ್ಟ ದಾಖಲೆಗಳಿದ್ದಲ್ಲಿ ಹಾಜರುಪಡಿಸುವಂತೆ ಮೌಖಿಕವಾಗಿ ಸೂಚಿಸಲಾಗಿರುತ್ತದೆ.<br><br>ಆದರೆ ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿರುವ ವ್ಯಕ್ತಿಯಲ್ಲಿ ಮಂಡಳಿಯಿಂದ ನೀಡಿರುವ ಪರಿಚಯ ಪತ್ರ ಹಾಗೂ ಬಿ.ಡಿ.ಎ ವತಿಯಿಂದ ನೀಡಿರುವ ಸ್ವಾಧೀನ ಪತ್ರಗಳ ದಾಖಲೆಗಳು ಇಲ್ಲದಿರುವುದು ಕಂಡು ಬಂದಿರುವುದರಿಂದ ಖಾಸಗಿ ವ್ಯಕ್ತಿಗೆ ಯಾವುದೇ ನೋಟೀಸ್ ನೀಡಲು ಬರುವುದಿಲ್ಲ. ಅನಧಿಕೃತವಾಗಿ ನಿರ್ಮಾಣ ಹಂತದಲ್ಲಿದ್ದ ಯಾವುದೇ ದಾಖಲೆಗಳಿಲ್ಲದ ಶೆಡ್‌ಗಳನ್ನು ತೆರವುಗೊಳಿಸಲಾಗಿದೆ. |
| ಆ) | ಸರ್ಕಾರವು ಈ ವಿಷಯದಲ್ಲಿ ಸರ್ಕಾರದ ಅಧಿಕಾರಿಗಳಿಂದ ತಪ್ಪಾಗಿರುವುದನ್ನು ಒಪ್ಪಿದ್ದು, ಸದನದಲ್ಲಿ ಭರವಸೆ ನೀಡಿದ್ದು, ಇದುವರೆಗೂ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ದಾಖಲೆ ಸಹಿತವಾಗಿ ವಿವರ ನೀಡುವುದು) | |
| ಇ) | ಯಾವುದೇ ನೋಟಿಸ್ ನೀಡದೆ ವಾಸವಿರುವ ಮನೆಯನ್ನು ಕೆಡವಿದ ಅಧಿಕಾರಿಗಳ ಮೇಲೆ ಅನೇಕ ದೂರುಗಳನ್ನು ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು; | ದೂರಿನ ವಿಷಯವಾಗಿ ಈಗಾಗಲೇ ದಿನಾಂಕ:19-02-2024 ರಂದು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ನಂ.1ನೇ ಉಪವಿಭಾಗ, ಬೆಂಗಳೂರು ರವರ ಕಛೇರಿಯಿಂದ ದೂರುದಾರರಿಗೆ ಹಿಂಬರಹ ನೀಡಲಾಗಿದೆ. |
| ಈ) | ಅನಧಿಕೃತವಾಗಿ ಮನೆಯನ್ನು ಕೆಡವಿ ಅನ್ಯಾಯವಾಗಿರುವವರಿಗೆ ಸರ್ಕಾರದಿಂದ ಯಾವ ಪರಿಹಾರ ನೀಡಲಾಗಿದೆ? (ದಾಖಲೆ ಸಹಿತ ವಿವರ ನೀಡುವುದು) | ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿರುವ ವ್ಯಕ್ತಿಯ ಬಳಿ ಮಂಡಳಿಯಿಂದ ನೀಡಿರುವ ಪರಿಚಯ ಪತ್ರ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನೀಡಿರುವ ಸ್ವಾಧೀನ ಪತ್ರಗಳ ದಾಖಲೆಗಳು ಇಲ್ಲದಿರುವುದು ಕಂಡು ಬಂದಿರುವುದರಿಂದ ಸದರಿಯವರಿಗೆ ಯಾವುದೇ ಪರಿಹಾರ ನೀಡಿರುವುದಿಲ್ಲ. |

ಸಂಖ್ಯೆ:ವಇ 60 ಎಸ್‌ಬಿಎಂ 2025

B. Zameer

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.